ಮೈಸೂರ ಗೆಜಿಟ್.

ನಂ. 24 ಸರ್ಕಾರದಿಂದ ಘಾಯಿಷ್ ಆದ್ದು. ಸ್ 1887.

ಬೆಂಗಳೂರು, ಶನಿವಾರ, ಜೂ ತಾ|| 18, ಸ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನ್‌ರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರಸಿಡೆಂಟರು, ಚೀಫ್ ಜಡ್ಜ್‌ಯವರು, ಸರ್ವೆ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬ್ಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟ್ಆಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟಆಕ್ಟುಗಳು ವರೆಗ್ಯುಲೇಷ್ಷಗಳು, ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 27ನೇ ಮೇ 1887.

ನಂ. 28.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷ್ಷ ಆಕ್ಟ್ 6ನೇ ಸೆಕ್ಷ್ಷ ನಿಯಮಗಳನುಸರಿಸಿ ಪ್ರಕಟಪಡಿಸುವದೇನಂದರೆ, ಇದರಡೀ ಕಂಡ ತಖ್ತೆಯಲ್ಲಿ ವಿವರಿಸಲ್ಪಟ್ಟ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ, ಕಡಬದ ಕೆರೆ ಹರಿ ರಿಪೇರಿಗೋಸ್ಕರ ಮಣ್ಣು ಅಗಿಯುವ ಬಗ್ಗೆ ಬೇಕಾಗಿರುತ್ತೆ:—

ತಾಲ್ಲೂಕು.	ಗ್ರಾಮ.	ಹಿಡುವಳಿದಾರನ ಹೆಸರು.	ವಿವರ.	ನಂಬರು.	ಜಿಲ್ಕಾದ ವಿಸ್ತೀರ್ಣ.	ಕಂದಾಯ.	ಚತುರ್ಗಡಿ.
ಗುಬ್ಬಿ	ಕಣಜು	ನಾರಾಯಣಸಾನಯ್ಯಂಗಾರ್, (ಹಿಡುವಳಿದಾರ ಗುರುಪಾದಾರ್ಪಣ)	ಬಾಗಾಯತು	54	ಯ. ಗು. ಗ 0 1 119	ಜೊ. ಜೊ ಲ. 4 0 ರೊ. 0	ಪೂರ್ವಕ್ಕೆ ಕೊರೆಕಲು, ಪಶ್ಚಿಮಕ್ಕೆ ಬಾಗಾಯತು ನಂಬರ್ 52 ಮತ್ತು 54 ರ ಪೈಕಿ ಉತ್ತರಕ್ಕೆ ಕೆರೆಪರಿ, ದಕ್ಷಿಣಕ್ಕೆ ನಂಬರ್ 54ರ ಪೈಕಿ ಮತ್ತು ಬಾಗಾಯತು ನಂಬರ್ 55.

ತಾರೀಖು 23ನೇ ಮೇ 1887.

ನಂ 30.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೀಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀಮಾಡಲ್ಪಟ್ಟಿರುವ ಈಕೆಳಗೆಕಂಡ ಕಾಯಂಗುತ್ತಾ ಗ್ರಾಮವು ಇದರಡೀಕಂಡ ತಖ್ತೀಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳ್ಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಸಬ್ ಡಿವೀರ್ಜ್ ಆಫೀಸರವರು ತಮ್ಮ ಯಖ್ತ್ಯಾರೀ ಮೇಲೆ ಪ್ರತಿ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಜಬೇಕಾಗಿರುತ್ತೆ ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿವಸಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಮಾಕಲ್ಪಡುವವು.

5 ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತಿಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇವೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುವ್ಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮುದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವೀರ್ಜ್ ಆಫೀಸರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು ತಾಸೀಲ್ದಾರ್ಲಾಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತಾಗ್ಗೆಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿರ್ವಾರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು. ತಾಲ್ಲೂಕು. ಹೋಬಳಿ.	ಗ್ರಾಮ.	ಕಾಯಂಗು ತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ಯಿಟೆರೆಂಟ್.	ಯಾವಬುಕೀಗೋ ಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬುಕೀ.	ಹರಾಜು ತಾರೀಖು ವಗೈರೆ.
ಮೈಸೂರು. ಶ್ರೀರಂಗಪಟ್ಟಣ. ಕೆಸ್ತೂರು.	ಮುಂಡಗದರಿ.	ಕೂಸಂಣ್ಣಾಚಾರಿ ಮತ್ತು ಇತರರು ಇಬ್ಬರು	ಯು. ಗುಂ. ಗ. 264 3 39½	ರೂ. ಆ. ಪೈ. 1621 7 4	ರೂ. ಆ. ಪೈ. 1056 9 10	ರೂ. ಆ. ಪೈ. 789 14 9	ಬರುವ ಜೂಲೈ ತಾರೀಖು 4ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರ ರೂಬರೂ.

ತಾರೀಖು 30ನೇ ಮೇ 1887.

ಕ್ಯಾಂಪ್ ನಂ. 626.—ಸ ೧೮೭೦ನೇ ಇಸವಿ Xನೇ ನಂಬರ್ ಲ್ಯಾಂಡು ಅಕ್ವಿಜಿಷ್ಷ ಆಕ್ಟು 6ನೇ ಸೆಕ್ಷ್ಯ ನಿಯಮಗಳನ್ನು ಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡೀಕಂಡ ತಖ್ತೇಯಲ್ಲಿ ವಿವರಿಸಲ್ಪಟ್ಟಿ ಜಮೀನು ಸರ್ತಾರದ ಕೆಲಸಗಳಿಗೋಸ್ಕರ ಅಂದರೆ ತುಮಕೂರು ಡಿಸ್ಟ್ರಿಕ್ಟು ಚಿಕ್ಕನಾಯಕನಹಳ್ಳಿ ತಾಲ್ಲೂಕು ತಿಮ್ಮನಹಳ್ಳಿ ಕೆರೆ ಕಾಮುಗಾರಿಗಾಗಿ ಮಣ್ಣು ಅಗಿಯುವ ಬಗ್ಯೆ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಪಿಡುವಣ್ಣಿದಾರರ ಹೆಸರು.	ಬೇಕಾಗಿರುವ ಜಮೀನ್ ಆವರಣ.				ಚವುತಪ್ಪರ್ದ.			
				ತರಗತಿ.	ಸರ್ವೇ ನಂ.	ಬೀಜವರೀ.	ಬೇರೀಜು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ತುಮಕೂರು	ಚಿಕ್ಕನಾಯಕನಹಳ್ಳಿ	ಬಿದರೆಕಟ್ಟೆ	ನಂಜಪ್ಪ	ಬಾಗಾಯತು	9	2	೧೨ ೨೨	ಸರ್ವೇ ನಂ. ೮ರಲ್ಲಿ ದ್ದುನ್ನಿನ ಕೆರೆದ 4ನೇ ನಂಬರು ಬಾಗಾಯತು	ತಿಮ್ಮನಹಳ್ಳಿ ಕೆರೆ ದಿಬೀರಿ	ಕಾಲವೆ	ಸೊಪ್ಪಿಂಡ ನಂಬರಿನ ಖುಷ್ಕಿ ಭಾಗ

ತಾರೀಖು 1ನೇ ಜೂ 1887.

ನಂ. 33.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗಾವೆಯು ಇದರಡೀ ಕಂಡ ತಖ್ತೆಯಲ್ಲಿ ನಮೂದಿಸುವ ಸ್ಥಳದಲ್ಲೂ ಆ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದವಳಿಸ್ಪದನಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡಿಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಮಾಡಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿವಸಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳೆ ಹರಾಜು ಹಾಕಲ್ಪಡುವವೆ.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ನೀಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮ್ಮಾದ್ದಾಗಿರುವದಿಲ್ಲವೆ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಾಸೀಲೆನ್ನಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟುಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿವಿಷನ್. ತಾಲ್ಲೂಕು. ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಜೀರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಫ್ವೈಟ್‌ರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
ಹೊಸಕೋಟೆ. ಜೊಳೇನರಸೀಪುರ.	ಗುಬ್ಬಿ. ಚೋಳೂರಿ ಗುಬ್ಬಿ, ಅಬದರ ಕಡೆ ಚಿಲ್ಲಿ ಪಾಳ್ಯಗಳು.	ಹೆಬ್ಬಾರ ನಂಜಪ್ಪ, ಇತರ 62 ಮಂದಿ.	ಖಂ. ಕೂ. ಪ. 0 0 0	ರೂ. ಆ. ಪೈ. 835 5 6	ರೂ. ಆ. ಪೈ. 590 3 4	ರೂ. ಆ. ಪೈ. 1,986 12 10 ಪೋಟಿಸ್ ಫೀ ಮತ್ತು ಹರಾಜು ತಾರೀಖು ವರೆಗಿನ ಖರ್ಚೀ.	ಮುಂದಿನ ತಿಂಗಳು ತಾರೀಖು 15ರಲ್ಲು ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರ ರೂಬರೂ.

ತಾರೀಖು 9ನೇ ಜೂರ್ 1887.

ನಂ. 34.—ಸ್ರ 1887ನೇ ಇಸವಿ ಏಪ್ರೆಲ್ 22ನೇ ಮಂಗಳವಾರ ನಂಬರು ಇಸ್ತಿಹಾರ್ನಾಮೆಯಲ್ಲಿ ಸ್ವಂತ ಕೆಲಸದ ಮೇಲೆ 3 ತಿಂಗಳ ರಜಾ ಕೊಡಲ್ಪಟ್ಟ ಕಡೂರು ಡಿಸ್ಟ್ರಿಕ್ಟು ಕೊಪ್ಪಾ ತಾಲ್ಲೂಕು ಅಮಲ್ದಾರ್ ಲಕ್ಷ್ಮಿನಾರಣಪ್ಪನವರು, ಸ್ರ 1887ನೇ ಇಸವಿ ಮೇ 23ನೇ ಮಂಗಳವಾರ ಪೂರ್ವಾನ್ನದಲ್ಲಿ ಕೆಲಸದ ಮೇಲೆ ಹಾಜರಾಗಿರುವದರಿಂದ ಅವರು ಉಪಯೋಗಿಸಿಕೊಳ್ಳದೆ ಪುಳದಿರು ವ 2 ತಿಂಗಳು 19 ದಿನಗಳ ರಜಾ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 19ನೇ ಮೇ 1887.

ಕ್ಯಾಂಪ್ ನಂ. 551.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷ್ನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡೀಕಂಡ ತಖ್ತೆಯಲ್ಲಿ ವಿವರಿಸಲ್ಪಟ್ಟ ಜಮೀನುಗಳು ಮೈಸೂರು ಪಟ್ಟಣದಲ್ಲಿ ಸರ್ಕಾರ್ ಕೆಲಸಕ್ಕೋಸ್ಕರ ಬೇಕಾಗಿರುತ್ತೆ:—

ತಖ್ತೆ.

ನಂಬರ್.	ಇರತಕ್ಕ ಪ್ರದೇಶ.	ಸ್ವಂತಗಾರರ ಹೆಸರು.	ವಿಸ್ತೀರ್ಣ. ಪೂರ್ವ ಪಶ್ಚಿಮ.	ವಿಸ್ತೀರ್ಣ. ಉತ್ತರ ದಕ್ಷಿಣ.	ವಿವರಣೆ.	ಯಾವ ಕೆಲಸಕ್ಕೆ ಬೇಕಾಗಿರುತ್ತೆ.	ಚಕ್ಕುಬಂದಿ ತಪಸೀಲ್.
			ಅಡಿ.	ಅಡಿ.			
1	ದೊಡ್ಡಕೆರೆ ಯೀರಿ ಹಿಂಭಾಗದ ಕೃಷ್ಣರಾಜಮೊಹಲ್ಲೆ	ಸಿದ್ದಬಸವದೇವರು	50 500 300 94	150 200 144 74	ಮನೆ ದೇಖೀಲ್ ತೋಟ	ಗಲೀಜು ಜಮಾಯಿಸುವ ಸರಕಾರದ ಕಾರಖಾನೆ ಬಳ್ಳಯ್ಯನವರ ಕಾಲ್ವೆ	ಪೂರ್ವಕ್ಕೆ ದೊಡ್ಡಕೆರೆ ಯೀರಿ ಹಿಂಭಾಗದ ರಸ್ತೆ, ಪಶ್ಚಿಮಕ್ಕೆ ಪೂರ್ಣಯ್ಯನವರ ಕಾಲ್ವೆ, ದಕ್ಷಿಣಕ್ಕೆ ಜಪದಕಟ್ಟೆ ಮಠ, ಉತ್ತರಕ್ಕೆ ಸರಕಾರದ ಗಲೀಜಾ ಕಾರಕಾನೆ.
1	ದೇವರಾಜಮೊಹಲ್ಲಾದ ಸಂತೇಬೀದಿ	ಪುಟ್ಟಬಸಪ್ಪ	58	34	ತಾರಸೆ ಮನೆಯ 2 ಅಂಕಣ, ಹಂಚಿನಮನೆಯ 3 ಅಂಕಣ, ಹಂಚಿನ 3 ಅಂಕಣದ ಕೈಸಾಲೆ ಮತ್ತು ಭಾವಿ	ರಮಾವಿಲಾಸದ ರಸ್ತೆ ಬಡಾಯಿಸುವ ಬಗ್ಗೆ.	ಪೂರ್ವಕ್ಕೆ ಬಂಜರ್ ಜಮೀನ್ ದಕ್ಷಿಣಕ್ಕೆ ಶ್ರೀನಿವಾಸಕಟ್ಟೆ, ಪಶ್ಚಿಮಕ್ಕೆ ರಮಾವಿಲಾಸದ ರಸ್ತೆ, ಮತ್ತು ಉತ್ತರಕ್ಕೆ ಜೋಗಿ ಸಿದ್ದಯ್ಯನ ಮನೆ.
2	ಡಿಟೋ ಡಿಟೋ	ಜೋಗಿ ಸಿದ್ದಯ್ಯ	38	15	ಹಂಚಿನ ಮನೆಯ 4 ಅಂಕಣಮತ್ತು ಹಂಚಿನ ಕೈಸಾಲೆಯ 8 ಅಂಕಣ	ಡಿಟೋ	ಪೂರ್ವಕ್ಕೆ ಬೊಮ್ಮಯ್ಯನ ಛತ್ರ, ದಕ್ಷಿಣಕ್ಕೆ ಪುಟ್ಟಬಸಪ್ಪನವರ ಮನೆ, ಮತ್ತು ಗುಡಿ, ಪಶ್ಚಿಮಕ್ಕೆ ರಮಾವಿಲಾಸದ ರಸ್ತೆ ಮತ್ತು ಉತ್ತರಕ್ಕೆ ಬೊಮ್ಮಯ್ಯನ ಛತ್ರಕ್ಕೆ ಹೋಗುವ ರಸ್ತೆ.
3	ಡಿಟೋ ಡಿಟೋ	ಪಾಪಯ್ಯ	96	24	ತಖ್ತಪೋಷ್ ಮನೆಯ 9 ಅಂಕಣ, ಹಂಚಿನ ಮನೆಯ 9 ಅಂಕಣಮತ್ತು ಹಂಚಿನ ಕೈಸಾಲೆಯ 9 ಅಂಕಣ	ಡಿಟೋ	ಪೂರ್ವಕ್ಕೆ ಕೋಟೆ ಕಂದಕದ ಪಕ್ಕದಲ್ಲಿರುವ ರಸ್ತೆ, ದಕ್ಷಿಣಕ್ಕೆ ನರಸಿಪ್ಪಯ್ಯನ ಮನೆ, ಪಶ್ಚಿಮಕ್ಕೆ ರಾಜಬೀದಿ ಮತ್ತು ಉತ್ತರಕ್ಕೆ ಕಣುವಯ್ಯನ ಮನೆ.

ನಂಬರ್.	ಇರತಕ್ಕ ಪ್ರದೇಶ.	ಸ್ವಂತಗಾರರ ಹೆಸರು.	ವಿಸ್ತೀರ್ಣ.		ವಿವರಣೆ.	ಯಾವ ಕೆಲಸಕ್ಕೆ ಬೇಕಾಗಿರುತ್ತೆ.	ಚಕ್ಕುಬಂದಿ ತನಸೀಲ್.
			ಪೂರ್ವ ಪಶ್ಚಿಮ	ಉತ್ತರ ದಕ್ಷಿಣ.			
4	ದೇವರಾಜ ಮೊಹಲ್ಲಾದ ಸಂತೇಬೀದಿ.	ನರಸಿಪ್ಪ.	96	13	ಹಂಚಿನ ಮನೆಯ ರೆವೂವಿಲಾಸದ ರ 4½ ಅಂಕಣ ಮನೆ ಬಿಡಾಯಿಸುವ ತ್ತು ಹಂಚಿನ ಕೈಬಿಸ್ಯೆ. ಸಾಲೆಯ 3 ಅಂಕಣ.		ಪೂರ್ವಕ್ಕೆ ಕೋಟೆ ಕಂದಕದ ಹಕ್ಕದಲ್ಲಿರುವ ರಸ್ತೆ, ದಕ್ಷಿಣಕ್ಕೆ ಚಿನ್ನಪ್ಪನಮನೆ, ಪಶ್ಚಿಮಕ್ಕೆ ರಾಜಬೀದಿ ಮತ್ತು ಉತ್ತರಕ್ಕೆ ಪಾಪಯ್ಯನ ಮನೆ.
5	ಡಿಟೋ ಡಿಟೋ	ಚಿನ್ನಯ್ಯ	96	13	ಹಂಚಿನ ಮನೆಯ 4½ ಅಂಕಣ ಮತ್ತು ಕೈಸಾಲೆಯ 3 ಅಂಕಣ.	ಡಿಟೋ	ಪೂರ್ವಕ್ಕೆ ಕೋಟೆ ಕಂದಕದ ಹಕ್ಕದಲ್ಲಿರುವ ರಸ್ತೆ, ಪಶ್ಚಿಮಕ್ಕೆ ರಾಜಬೀದಿ, ಉತ್ತರಕ್ಕೆ ನರಸಿಪ್ಪಯ್ಯನ ಮನೆ, ದಕ್ಷಿಣಕ್ಕೆ ನರಸಿಪ್ಪಯ್ಯನ ಮನೆ.
1	ಕೃಷ್ಣರಾಜ ಮೊಹಲ್ಲಾದ ಪರಹಾಸ್ಯಾಮಿ ಅಗ್ರಹಾರದ ಬೀದಿ.	ಮೈಸೂರು ತಾಲ್ಲೂಕು ರಿಕಾರ್ಡ್ ಕೀಪರ್ ವ್ಯಾಸರಾಯರು.	34	6	ಹಂಚಿನ ಮನೆಯ 5 ಅಂಕಣ.	ಪಾಕೀಜ್ ಇಡತಕ್ಕ ಬಗ್ಯೆ ಚರಂಡಿನೆ ತಯಾರಿಗೋಸ್ಕರ.	ಪೂರ್ವಕ್ಕೆ ಭೀಮರಾಯರ ಮನೆ, ಪಶ್ಚಿಮಕ್ಕೆ ಕಾಮರಾಯರ ಮನೆ, ದಕ್ಷಿಣಕ್ಕೆ ನೀಲಕಂಠರಾಯರ ಮನೆ ಮತ್ತು ಉತ್ತರಕ್ಕೆ ವ್ಯಾಸರಾಯರ ಮನೆ.
1	ನಜರ್‌ಬಾದ್ ಮೊಹಲ್ಲಾದ ಇಟ್ಟಿಗೆಗೂಡು.	ಬಂಡಿ ಚಿಕ್ಕಂಣ ಬಂಡಿ ಲಿಂಗಂಣ.	24½ 37	13 18	ಹಂಚಿನ ಮನೆಗಳು ಹಿತ್ತಲುಗಳು ಸಜ.	ಇಟ್ಟಿಗೆ ಗೂಡಿನ ರಸ್ತೆಯ ಅಗಲ ಬಿಡಾಯಿಸುವಬಗ್ಯೆ	ಪೂರ್ವಕ್ಕೆ ರಾಜಬೀದಿ, ಪಶ್ಚಿಮಕ್ಕೆ ಬೆಟ್ಟಯ್ಯಂಣನ ಮನೆ, ಉತ್ತರಕ್ಕೆ ಭವಾನಮ್ಮನ ಮನೆ, ದಕ್ಷಿಣಕ್ಕೆ ಮ್ಯೂನಿಸಿಪಲ್ ಬಂಜರ್ ಜಮೀನ್.

ತಾರೀಖು 3ನೇ ಜೂನ್ 1887.

ಕ್ಯಾಂಪ್ ನಂ. 653.—ಹೆಗ್ಗಡದೇವನಕೋಟೆ ಅಮಲ್ದಾರ್ ಯು. ವೆಂಕಟರಾಯರಿಗೆ, ಸನ್ 1887ನೇ ಇಸವಿ ಮೇ 10ನೇ ಮತ್ತು ಕ್ಯಾಂಪ್ 374ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ರಜಾಕ್ಕೆ ಇಸ್ತಿಯಾಗಿ 15 ದಿನಗಳ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 655.—ಸನ್ 1887ನೇ ಇಸವಿ ಏಪ್ರಿಲ್ 15ನೇ ಮತ್ತು 117ನೇ ನಂಬರ್ ಈ ಆಫೀಸಿನ ಇಸ್ತಿಹಾರ್‌ನಾಮೆಯನ್ನನುಸರಿಸಿ, ಮಂಜರಾಬಾದ್ ತಾಲ್ಲೂಕು ಶಿರಸ್ತೇದಾರ್ ಸುಬ್ಬರಾಯರು ಬೇಲೂರು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು, ಮತ್ತು ಅವರು ಅಮಲ್ದಾರ್ ಕೇಶವಯ್ಯಂಗಾರ್ ರಜಾದಮೇಲೆ ಇರುವ ಕಾಲದಲ್ಲಿ ಯಾ ಮತ್ತೊಮ್ಮೆ ಹುಕ್ಕುಂ ಕೊಡುವ ಪರ್ಯಂತ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ 12ನೇ ಸೆಕ್ಷನ್ ಅನುಸರಿಸಿ, 3ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳನ್ನು ಚಲಾಯಿತಕ್ಕದ್ದು.

ತಾರೀಖು 4ನೇ ಜೂನ್ 1887.

ಕ್ಯಾಂಪ್ ನಂ. 669.—ಮುನಸೀಫರಾಗಿ ನಿಯಮಿಸಲ್ಪಟ್ಟ ಮೆ|| ಕೇಪಗಿರಾಯರಿಗೆ ಬದಲಾಗಿ ಅಡ್ವೊಕೇಟ್ ಮೆ|| ಯಸ್. ರಾಮಸ್ವಾಮಯ್ಯರವರು ಬೆಂಗಳೂರಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 673.—ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಸೈಯ್ಯದ್ ನಸಿರುದ್ದೀಯವರಿಗೆ, 1887ನೇ ಇಸವಿ ಮೇ 22ನೇ ಮಕ್ತಂ ಯಾ ಅವರು ಉಪಯೋಗಿಸಿಕೊಂಡಿರಬಹುದಾದ ತಾರೀಖು ಲಾಗಾಯತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 6ನೇ ಜೂ೯ 1887.

ಕ್ಯಾಂಫ್ ನಂ. 715.—ಕಡೂರು ತಾಲ್ಲೂಕು ಅಮಲ್ದಾರ್ ಪಿ. ಶ್ರೀನಿವಾಸರಾಯರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು 1 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಶ್ರೀನಿವಾಸರಾಯರು ರಜಾದ ಮೇಲೆ ಇರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವವರಿಗೆ ಅಸ್ತೀದಾರ್ ಸುಬ್ಬಣ್ಣನವರು ಕಡೂರು ತಾಲ್ಲೂಕು ಛಾರ್ಜ್ ವಹಿಸಿರತಕ್ಕದ್ದು. ಇವರಿಗೆ 3ನೇ ಕ್ಲಾಸ್ ಮೇಜಿಸ್ಟ್ರೇಟ್ ಅಧಿಕಾರಗಳು ಇದರಿಂದ ಕೊಡಲ್ಪಟ್ಟಿರುತ್ತೆ.

ಹುಕ್ಕುಂ ಬಮೋಜೀಬ್,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರಟೇರಿ.